ಊ) ಮೇಲಿನ 574.00 ಲಕ್ಷ ರೂ.ಗಳನ್ನು ಹೊರತುಪಡಿಸಿ. ಆರಂಭದಿಂದ ಮಾಸ್ತಿಕಟ್ಟೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಛೇರಿ ಮತ್ತು ಇತರೆ ಸ್ಥಿರ ಆಸ್ತಿಗಾಗಿ ಮಾಡಿದ ಖರ್ಚು 410 ಲಕ್ಷ ರೂ.ಗಳು (ನಿಗಮದ ಸ್ಥಿರಾಸ್ತಿ ಪಟ್ಟಿಯ ಪ್ರಕಾರ).

ಋ) ವರಾಹಿ ಯೋಜನೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ 15 ವರ್ಷಗಳು ಕಳೆದಿವೆ. ಮಾಸ್ತಿಕಟ್ಟಡ ವಸಾಹತುವಿನಲ್ಲಿ 1977–78ರ ಅವಧಿಯಲ್ಲಿ ತಾತ್ಕಾಲಿಕ (Temporary) ಮನೆಗಳನ್ನು ಕಟ್ಟಲಾಗಿತ್ತು. ಸುಮಾರು 25 ವರ್ಷ ಉಪಯೋಗಿಸಿ ಈ ಮನೆಗಳ ಸಂಪೂರ್ಣ ಪ್ರಯೋಜನ ಪಡೆಯಲಾಗಿದೆ. ಈ ತಾತ್ಕಾಲಿಕ ಮನೆಗಳು ತೀರಾ ದುರಸ್ತಿಯಲ್ಲಿದ್ದು ವಾಸಯೋಗ್ಯವಿರುವುದಿಲ್ಲ.

ಅಗತ್ಯ ಸೇವಾ ನೌಕರರಿಗೆ ಮಾತ್ರ 1998–2000ದಲ್ಲಿ ಖಾಯಂ ನಿವಾಸಗಳ ನಿರ್ಮಾಣವಾಗಿದೆ.

ಋ) ಖಾಯಂ ನಿವಾಸಗಳ ನಿರ್ಮಾಣ ಮೇಲಿನ ಕಂಡಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಆಗಿದೆ. ಕಛೇರಿಗಳ ಸ್ಥಳಾಂತರವನ್ನು ಯೋಜನಾ ಕಾರ್ಯದ ನಿರ್ವಹಣೆಯ ಹಿತ ದೃಷ್ಟಿಯಿಂದ ಕೈಗೊಳ್ಳಲಾಗಿದೆ. ಆದುದರಿಂದ, ಸರಿಯಾದ ನಿಟ್ಟಿನಲ್ಲೇ ತೀರ್ಮಾನ ತೆಗೆದುಕೊಳ್ಳಲಾಗಿದೆ.

537(790) : ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಿಗುಡ್ಡ ನೀರಾವರಿ ಯೋಜನೆ ಯಾವ ಹಂತದಲ್ಲಿದೆ;

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಎಷ್ಟು ಕ್ಷೇತ್ರ ನೀರಾವರಿಯಲ್ಲಿವೆ ಹಾಗೂ ಅವು ಯಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಸಿಂಗಟಾಲೂರು–ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 115 ವಿಬ್ಯಾಇ 2003, ದಿನಾಂಕ 6–9–2003ರನ್ವಯ ರೂ. 787 ಕೋಟಿ ಮೊತ್ತದ ಮಾರ್ಪಡಿತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆಗಾಗಿ ಕರ್ನಾಟಕ ನೀರಾವರಿ ನಿಗಮದಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು ಬ್ಯಾರೇಜ್ ಮತ್ತು ಗೇಟಿನ ಕೆಲಸಗಳನ್ನು ವಹಿಸಿಕೊಡಲಾಗಿದೆ. ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಕಡಿಮೆಯಾದಾಗ ಬ್ಯಾರೇಜ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ, ಯೋಜನಾವಾರು ನೀರಾವರಿಗೊಳಪಡುವ ಹಾಗೂ ಈಗಾಗಲೇ ನೀರಾವರಿಯಾಗುತ್ತಿರುವ ಕ್ಷೇತ್ರದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಯೋಜನೆಯ ಹೆಸರು	ನೀರಾವರಿಗೊಳಪಡುವ ಕ್ಷೇತ್ರ (ಎಕರೆಗಳಲ್ಲಿ)	ಈವರೆಗೆ ನೀರಾವರಿಯಾಗುತ್ತಿರುವ ಕ್ಷೇತ್ರ (ಎಕರೆಗಳಲ್ಲಿ)
1.	ಟಿ.ಬಿ.ಪಿ. ಎಡದಂಡೆ ಮೇಲ್ಮಟ್ಟದ ಕಾಲುವೆ	1159	1159
2.	ಟಿ.ಬಿ.ಪಿ. ಎಡದಂಡೆ ಮುಖ್ಯ ಕಾಲುವ	153512	153512
3.	ಹಿರೇಹಳ್ಳ ಯೋಜನೆ	20583	5950
4.	ಸಿಂಗಟಾಲೂರು–ಹುಲಿಗುಡ್ಡ ಏತ ನೀರಾವರಿ ಯೋಜನೆ	36000	–
	ಒಟ್ಟು	**211254**	**160621**

538(847) : ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದಿನ ಸರ್ಕಾರ ಆಯವ್ಯಯ ಭಾಷಣದಲ್ಲಿ ಆಲಮಟ್ಟಿ ಜಲಾಶಯದ ಎತ್ತರವನ್ನು 524–25 ಮೀ.ಕ್ಕೆ ಎತ್ತರಿಸಲು ಬದ್ಧವಾಗಿದೆ ಎಂದು ತಿಳಿಸಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಈವರೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಜಲಾಶಯನ ಎತ್ತರವನ್ನು ಹೆಚ್ಚಿಸಿದಲ್ಲಿ ಬಾಗಲಕೋಟೆ ಪಟ್ಟಣದ ಉಳಿದ ಪ್ರದೇಶವನ್ನು ಬಾಧಿತ ಪ್ರದೇಶವೆಂದು ಪರಿಗಣಿಸಲಾಗುವುದೆ;

ಈ) ಪರಿಗಣಿಸಿದಲ್ಲಿ ಭೂಸ್ವಾಧೀನ ಮತ್ತು ಪುನರ್ ವಸತಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಹೌದು.

ಆ) ಈಗ ಹೊಸದಾಗಿ ರಚಿಸಲಾಗಿರುವ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯ ಅಂತಿಮ ನಿರ್ಮಾಣದ ನಂತರ ಆಲಮಟ್ಟಿ ಜಲಾಶಯದಲ್ಲಿ 524.256 ಮೀ ಮಟ್ಟಕ್ಕೆ ನೀರನ್ನು ಶೇಖರಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಈ ಮೇಲಿನ ಉತ್ತರದಂತೆ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಮೇಲಿನ ಉತ್ತರದಂತೆ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

541(481) : ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮರೋಳ ಏತ ನೀರಾವರಿ ಯೋಜನೆಯನ್ನು ಸಮಗ್ರ ಹುನಗುಂದ

 ತಾಲ್ಲೂಕಿನಾದ್ಯಂತ ವಿಸ್ತರಿಸುವ ಕಾರ್ಯ ಪ್ರಗತಿಯಲ್ಲಿದೆಯೇ;